KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-416/2022-23/537 Date: 26/11/2022

## ಸುತ್ತೋಲೆ

ವಿಷಯ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್–ರೋವರ್ಸ್ & ರೇಂಜರರ್ಸ್ ಪಠ್ಯ ವಿಷಯವನ್ನು ಕಲಿಸುವ ಕಾರ್ಯಾಗಾರಕ್ಕೆ ತಮ್ಮ ಮಹಾವಿದ್ಯಾಲಯಗಳಿಂದ ಕನಿಷ್ಠ ಒಬ್ಬ ಅಧ್ಯಾಪಕ ಮತ್ತು ಒಬ್ಬ ಅಧ್ಯಾಪಕಿಯರನ್ನು ತರಬೇತಿ ಕಾರ್ಯಾಗಾರಕ್ಕೆ ಹಾಜರಾಗಲು ನಿಯೋಜಿಸುವ ಕುರಿತು.

ಉಲ್ಲೇಖ: 1. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಪತ್ರ ದಿನಾಂಕ: 10.11.2022.
2. ಕಚೇರಿ ಸುತ್ತೋಲೆ ಸಂ. KU/Aca(S&T)/SSL-416/2022-23/533 ದಿ. 19.11.2022.
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 26/11/2022

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಎಲ್ಲ ಸ್ನಾತಕ ಪದವಿಗಳಿಗೆ 2 ರಿಂದ 6ನೇ ಸೆಮಿಸ್ಟರ್‌ಗೆ ನಿಗದಿಪಡಿಸಿದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್–ರೋವರ್ಸ್ & ರೇಂಜರರ್ಸ್ ಪಠ್ಯ ವಿಷಯವನ್ನು ಒಂದು ಮೌಲ್ಯಾಧಾರಿತ (Value Based Course) ವಿಷಯವನ್ನು ಪರಿಣಾಮಕಾರಿಯಾಗಿ ಬೋಧಿಸಲು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹೆಡ್ ಕ್ವಾರ್ಟರ್ಸ್, ಬೆಂಗಳೂರು ಇವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎರಡು ದಿನ ಕಾರ್ಯಾಗಾರವನ್ನು ಏರ್ಪಡಿಸಲು ನಿರ್ಧರಿಸಿದ್ದಾರೆ. ಸದರಿ ಕಾರ್ಯಾಗಾರದಲ್ಲಿ ಪ್ರತಿ ಪದವಿ ಮಹಾವಿದ್ಯಾಲಯದಿಂದ ಕನಿಷ್ಠ ಒಬ್ಬ ಅಧ್ಯಾಪಕ ಮತ್ತು ಒಬ್ಬ ಅಧ್ಯಾಪಕಿಯರನ್ನು ನೇಮಕ ಮಾಡಿ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಲು ಕ್ರಮಕೈಗೊಳ್ಳಬೇಕಾಗಿರುತ್ತದೆ ಎಂದು ಉಲ್ಲೇಖ 2ರ ಪ್ರಕಾರ ಈಗಾಗಲೇ ತಿಳಿಸಲಾಗಿದೆ. ಆದ್ದರಿಂದ, ತಮ್ಮ ಮಹಾವಿದ್ಯಾಲಯದಿಂದ ಈ ಮೇಲಿನಂತೆ ಉಪನ್ಯಾಸಕರನ್ನು ತರಬೇತಿ ಕಾರ್ಯಾಗಾರದಲ್ಲಿ ಈ ಕೆಳಗಿನ ವೇಳಾಪಟ್ಟಿಯಂತೆ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

| ಅ. ನಂ. | ತರಬೇತಿ ಸ್ಥಳಮಹಾವಿದ್ಯಾಲಯ | ತರಬೇತಿಗೆ ಹಾಜರಾಗಲು ನಿಗದಿಪಡಿಸಿದ ಜಿಲ್ಲಾ ವ್ಯಾಪ್ತಿ | ತರಬೇತಿ ದಿನಾಂಕ | ತರಬೇತಿ ಸಮಯ |
|---|---|---|---|---|
| 1 | ASS Commerce College, Gadag | ಗದಗ ಮತ್ತು ಹಾವೇರಿ ಜಿಲ್ಲೆಗಳ ಮಹಾವಿದ್ಯಾಲಯಗಳು | 05.12.2022 ಮತ್ತು 06.12.2022 | ಪ್ರತಿ ದಿನ ಬೆಳಿಗ್ಗೆ 9.30 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ |
| 2 | KLE's JG College of Commerce, Vidya Nagar, Hubballi | ಧಾರವಾಡ ಜಿಲ್ಲೆಯ ಮಹಾವಿದ್ಯಾಲಯಗಳು | 07.12.2022 ಮತ್ತು 08.12.2022 | |
| 3 | Dr. A.V.Baliga Arts & Science and Commerce College, Kumta | ಉತ್ತರ ಕನ್ನಡ ಜಿಲ್ಲೆಯ ಮಹಾವಿದ್ಯಾಲಯಗಳು | 09.12.2022 ಮತ್ತು 10.12.2022 | |

ಆದ್ದರಿಂದ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ತಮ್ಮ ಮಹಾವಿದ್ಯಾಲಯದಿಂದ ಕನಿಷ್ಠ ಒಬ್ಬ ಅಧ್ಯಾಪಕ ಮತ್ತು ಒಬ್ಬ ಅಧ್ಯಾಪಕಿಯರನ್ನು ನೇಮಕ ಮಾಡಿ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಲು ಸೂಚಿಸುವುದು. ಮುಂದುವರೆದು, ಮಹಾವಿದ್ಯಾಲಯಗಳು ಇಚ್ಛಿಸಿದಲ್ಲಿ ಈಗಾಗಲೇ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್–ರೋವರ್ಸ್ & ರೇಂಜರರ್ಸ್ ನೇತಾರ (Leader)ರೆಂದು ನೇಮಕವಾಗಿದ್ದರೆ, ಅಂತಹ ನೇತಾರ (Leader)ರನ್ನು ತರಬೇತಿ ಕಾರ್ಯಾಗಾರಕ್ಕೆ ಹಾಜರಾಗಲು ಸೂಚಿಸಬಹುದು. ತರಬೇತಿ ಕಾರ್ಯಾಗಾರಕ್ಕೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವಿಶ್ವವಿದ್ಯಾಲಯದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್–ರೋವರ್ಸ್ & ರೇಂಜರರ್ಸ್ ನೊಡಲ್ ಅಧಿಕಾರಿಗಳಾದ ಡಾ. ಎಂ.ಬಿ.ದಳಪತಿ, ಇವರನ್ನು ಸಂಪರ್ಕಸಬಹುದು (Cell No: 9845512977).

26/11
ಕುಲಸಚಿವರು

ಗೆ,

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

ಪು.ತಿ.ನೋ.

2. ಡಾ. ಎಂ.ಬಿ.ದಳಪತಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್–ರೋವರ್ಸ್ & ರೇಂಜರರ್ಸ್, ನೋಡಲ್ ಅಧಿಕಾರಿ ಮತ್ತು ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ
3. ನಿರ್ದೇಶಕರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹೆಡ್ ಕ್ವಾರ್ಟರ್ಸ್, ನಂ. 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು–01. ದೂರವಾಣಿ ಸಂ. 080–22343400, 22260017, 22267470 ಇ–ಮೇಲ್: info@bsgkarnataka.org
4. ಪ್ರೊ. ಬಿ.ತಿಮ್ಮೇಗೌಡ, ಉಪಾಧ್ಯಾಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು
5. ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರತಿ:

1. ನಿರ್ದೇಶಕರು, ಕಾಲೇಜು ಅಭಿವೃದ್ಧಿ ವಿಭಾಗ, ಕ.ವಿ.ವಿ. ಧಾರವಾಡ.
2. ನೋಡಲ್ ಅಧಿಕಾರಿಗಳು, UUCMS ಘಟಕ ಕ.ವಿ.ವಿ. ಧಾರವಾಡ.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಕ.ವಿ.ವಿ. ಅಂತರ್ಜಾಲ ಮುಖಾಂತರ ಬಿತ್ತರಿಸಲು ಕ್ರಮವಹಿಸುವುದು.